ಆರ್ಥಿಕ ಸಾಕ್ಷರತೆ ಕುರಿತು

ಹುಬ್ಬಳಿ : ಸ್ಥಳೀಯ ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗ ವಿದ್ಯಾನಗರ ಹುಬ್ಬಳ್ಳಿಯಲ್ಲಿ ದಿನಾಂಕ 13.04.2022 ರಂದು ಆರ್ಥಿಕ ಸಾಕ್ಷರತೆ ಕುರಿತು **ಉಪನ್ಯಾಸ** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. **ಶ್ರೀ ಚೈತನ್ಯ ಕಿತ್ತೂರ ಸಹಾಯಕ ಪ್ರಧ್ಯಾಪಕರು ಜೆ.ಎಸ್.ಎಸ್** ಮಹಾವಿದ್ಯಾಲಯ ಧಾರವಾಡ **ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆರ್ಥಿಕ ಹೂಡಿಕೆ, ಉಳಿತಾಯ, ಆರ್ಥಿಕ ಯೋಜನೆ ಮತ್ತು ಹೂಡಿಕೆಯ ಮನ್ನೆಚ್ಚರಿಕೆಯ ಕ್ರಮಗಳ ಕುರಿತು ಸುವಿಸ್ತಾರವಾಗಿ ಉಪನ್ಯಾಸವನ್ನು ನೀಡಿದರು.** ಇದೇ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಲಿಂಗರಾಜ ಸಿ ಮುಳ್ಳಳ್ಳಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಇಂದಿನ ಉಳಿತಾಯ ನಾಳಿನ ಭವಿಷ್ಯದ ಬುನಾದಿ ಎಂದು ಅಭಿಪ್ರಾಯಪಟ್ಟರು. ಉಪನ್ಯಾಸಕಿಯರಾದ ಶ್ರೀಮತಿ ಸುಪ್ರೀತಾ ಎಂ.ಬಿ ಅವರ ಪ್ರಾರ್ಥನೆ ಗೀತೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಉಪನ್ಯಾಸಕರಾದ ವೀರೇಶ ಕಲಕೇರಿ ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯದಾಗಿ ಉಪನ್ಯಾಸಕರಾದ ಡಾ ಅನೀಲ ಗುಮಗೋಳ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂಧಿ ವರ್ಗದವರು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು.